ಉತ್ತರ ಕನ್ನಡದಲ್ಲಿರುವ ಪ್ರವಾಸಿ ಕೇಂದ್ರಗಳಲ್ಲಿ ಪ್ರವಾಸಿ ಮಂದಿರಗಳನ್ನು ನಿರ್ಮಿಸುವ ಬಗ್ಗೆ

೬೪೪. ಶ್ರೀ ಎನ್. ಹೆಚ್. ಗೌಡ. (ಕುಮಟ).— ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಪ್ರವಾಸಿ ಕೇಂದ್ರಗಳಲ್ಲಿ ಎಷ್ಟಕ್ಕೆ ಪ್ರವಾಸಿ ಮಂದಿರಗಳಿವೆ?

ಆ) ಪ್ರವಾಸಿ ಮಂದಿರಗಳಿಲ್ಲದ ಕೇಂದ್ರಗಳು ಎಷ್ಟು? ಅವು ಯಾವುವು?

ಇ) ಅಂತಹ ಯಾವ ಯಾವ ಕೇಂದ್ರಗಳಲ್ಲಿ ಪ್ರವಾಸಿ ಮಂದಿರಗಳನ್ನು ನಿರ್ಮಿಸಲು ಸರ್ಕಾರ ಆಲೋಚಿಸಿದೆಯೆ?

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು) (ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ).—

ಅ) ದಾಂಡೇಲಿ, ಮಾಗೋಡು ಜಲಪಾತ ಮತ್ತು ಗೋಕರ್ಣ ಈ ಮೂರು ಪ್ರವಾಸಿ ಸ್ಥಳಗಳಲ್ಲಿ ಪ್ರವಾಸಿ ಮಂದಿರಗಳಿವೆ.

೨೫ ಕೇಂದ್ರಗಳಲ್ಲಿ ಪ್ರವಾಸಿ ಮಂದಿರಗಳಿಲ್ಲ ಅವುಗಳೆಂದರೆ

೧) ಕಾರವಾರ
೨) ಸೋಂದೆ
೩) ಹಳಿಯಾಳ
೪) ಯಾಣ
೫) ಉಂಚಳ್ಳಿ ಜಲಪಾತ
೬) ಲಾಲ್‌ಗುಡಿ ಜಲಪಾತ
೭) ಬನವಾಸಿ
೮) ಸೂಪಾ
೯) ಆಂಕೋಲಾ
೧೦) ಕುಮಟಾ
೧೧) ಕುರುವಾಗೋಡ್
೧೨) ಅಂಜನ್ ದ್ವೀಪಗಳು
೧೩) ಕೆಳದಿ
೧೪) ಚಂದ್ರಗುತ್ತಿ
೧೫) ಉಳುವಿ
೧೬) ಬೆಳ್ಳಿಗಾವಿ
೧೭) ಜಗ್ಗರ ಕಣಿವೆ
೧೮) ಉದುತಡಿ
೧೯) ಕ್ಯಾಕ್ಟಸ್‌ಲ್ ರಾಕ್
೨೦) ಶಿರಸಿ
೨೧) ಮುರುಡೇಶ್ವರ
೨೨) ಭಟ್ಕಳ
೨೩) ಸಿದ್ದಾಪುರ
೨೪) ಬೇಲೆಕೇರಿ
೨೫) ಧಾರೇಶ್ವರ

ಇ) ಕಾರವಾರ, ಬನವಾಸಿ, ಮುರುಡೇಶ್ವರ, ಬೇಲೆಕೇರಿ ಮತ್ತು ಸೂಪಾ (ರಾಮನಗರ)

ಜಿಲ್ಲಾ ಪರಿಷತ್ತು ಮಂಡಲ ಪಂಚಾಯತ್‌ಗಳಿಗೆ ಹಣ ಬಿಡುಗಡೆ ಬಗ್ಗೆ

೬೪೬. ಶ್ರೀ ಜಿ. ಎಸ್. ಆಚಾರ್ (ಬೈಂದೂರು).— ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ೧೯೮೮-೮೯ನೇ ವರ್ಷದಲ್ಲಿ ವಿವಿಧ ಜಿಲ್ಲೆಗಳ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತ್‌ಗಳಿಗೆ ನೀಡಲು ನಿಗದಿ ಆದ ಅನುದಾನವೆಷ್ಟು?

ಆ) ವರ್ಷದ ಪ್ರಥಮ ೯ ತಿಂಗಳುಗಳಲ್ಲಿ ಬಿಡುಗಡೆ ಆದ ಅನುದಾನ ಎಷ್ಟು ? (ಜಿಲ್ಲಾವಾರು ವಿವರ ನೀಡಿ)

ಇ) ಬಿಡುಗಡೆ ಆದ ಹಣದಲ್ಲಿ ವೆಚ್ಚವಾದುದೆಷ್ಟು (ಜಿಲ್ಲಾವಾರು ವಿವರ ನೀಡಿ)

ಶ್ರೀ ಎಂ. ಪಿ. ಪ್ರಕಾಶ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು),—

ಅ) ಆ) ಇ) ಅನುಬಂಧದಲ್ಲಿ ಕೊಡಲಾಗಿದೆ.

ಅನುಬಂಧ

ಕ್ರಮ ಸಂ.	ಜಿಲ್ಲೆಯ ಹೆಸರು	ನಿಗದಿಯಾದ ಅನುದಾನ	ಬಿಡುಗಡೆಯಾದ ಹಣ	ವೆಚ್ಚವಾದ ಹಣ
೧	ಬೆಂಗಳೂರು (ಗ್ರಾಮಾಂತರ)	೪೨೧೭.೯೧೪	೩೨೦೬.೮೭೦	೨೯೬೬.೨೨೦
೨	ಚಿತ್ರದುರ್ಗ	೫೩೪೦.೧೯೦	೪೨೯೦.೪೩೦	೪೦೮೪.೭೭೭
೩	ಕೋಲಾರ	೫೯೯.೨೦೬	೪೭೪೪.೯೮೬	೪೭೩೮ ೪೭೨
೪	ಶಿವಮೊಗ್ಗ	೪೭೯.೬೭೫	೨೮೪೬.೭೯೦	೮೦೨.೭೫೦
೫	ತುಮಕೂರು	೬೧೧೭.೫೭೭	೩೬೪೩.೧೪೨	೩೨೮೬.೧೨೦
೬	ಮೈಸೂರು	೭೧೦೧.೭೮೨	೫೧೨೧.೫೪೦	೪೫೧೮.೮೯೦
೭	ಚಿಕ್ಕಮಗಳೂರು	೩೩೫೮.೨೮೪	೫೮೦.೨೬೦	೫೫೭.೧೪೦
೮	ದಕ್ಷಿಣ ಕನ್ನಡ	೬೪೭೪.೭೦೦	೪೯೧೬.೨೨೨	೪೨೮೭.೭೧೬
೯	ಹಾಸನ	೪೬೯೩.೧೯೬	೪೩೭೦.೧೦೦	೪೧೧೭.೬೫೨
೧೦	ಕೊಡಗು	೨೯೨೯.೯೮೩	೧೬೧೬ ೧೯೫	೧೨೫೯.೧೪೭
೧೧	ಮಂಡ್ಯ	೪೨೭೦.೭೨೮	೩೪೭೫೫.೬೫೯	೨೭೨೮.೩೫೮
೧೨	ಬೆಳಗಾವಿ	೭೮೨೨.೬೫೫	೫೭೯೪.೫೪೦	೫೦೨೧ ೦೪೦
೧೩	ಬಿಜಾಪುರ	೬೭೪೨.೦೭೦	೫೭೯೪.೫೧೬	೫೨೯೭ ೯೯೯
೧೪	ಧಾರವಾಡ	೭೯೯೦.೩೫೯	೬೮೨೯ ೫೫೦	೫೮೮೦.೮೫೨
೧೫	ಉತ್ತರ ಕನ್ನಡ	೪೧೩೧.೦೮೯	೩೨೦೩.೩೧೮	೨೬೨೬.೪೬೫
೧೬	ಗುಲ್ಬರ್ಗಾ	೫೯೩೩.೮೮೩	೨೨೫೪.೩೫೦	೨೬೩೯.೬೫೦
೧೭	ಬಳ್ಳಾರಿ	೪೦೦೨.೨೮೭	೩೧೪೯.೪೫೬	೨೮೧೫ ೬೨೧
೧೮	ಬೀದರ್	೩೧೪೪.೯೨೯	೨೬೦೬.೨೫೯	೨೪೫೧.೩೫೬
೧೯	ರಾಯಚೂರು	೪೫೯೬.೨೮೮	೩೫೬೯.೫೯೮	೨೯೭೬.೪೦೩

ತೆಕ್ಕಲು ಕೋಟೆ ನೀರು ಸರಬರಾಜು ಯೋಜನೆ ಬಗ್ಗೆ

೫೩೮. ಶ್ರೀ ಸಿ. ಎಂ. ರೇವಣಸಿದ್ದಯ್ಯ (ಸಿರಗುಪ್ಪ).— ವಾಸ್ತ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

೧) ಸಿರಗುಪ್ಪ ತಾಲ್ಲೂಕ್ ತೆಕ್ಕಲಕೋಟೆ ಪಟ್ಟಣದ ಕುಡಿಯೋ ನೀರಿನ ಯೋಜನೆಯ ಅಂದಾಜು ಎಷ್ಟು?

೨) ಹಾಗಿದ್ದಲ್ಲಿ ಈ ಕೆಲಸ ಪ್ರಾರಂಭವಾಗಿರುವುದು ಯಾವಾಗ ಮತ್ತು ಈ ಬಗ್ಗೆ ಖರ್ಚಾದ ಹಣವೆಷ್ಟು?

೩) ಬಾಕಿ ಕೆಲಸವನ್ನು ೧೯೮೯-೯೦ರಲ್ಲಿ ಪೂರೈಸಲು ಬಜೆಟ್‌ನಲ್ಲಿ ಸೇರಿಸಲು ಕ್ರಮ ಕೈಗೊಳ್ಳಲಾಗಿದೆಯೇ?

ಶ್ರೀ ಆರ . ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

೧) ಈ ಯೋಜನೆಯ ಅಂದಾಜು ವೆಚ್ಚ ರೂ. ೭೫.೫೦ ಲಕ್ಷ ರೂ.ಗಳು.

೨) ಈ ಯೋಜನೆಯನ್ನು ೧೨ : ೫೫ರಲ್ಲಿ ಪ್ರಾರಂಭಿಸಲಾಯಿತು ಮತ್ತು ಈ ಯೋಜನೆಗೆ ಜನವರಿ ೮೯ರ ಕೊನೆಯವರೆಗೆ ೧೮.೮೨ ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ.

೩) ೧೯೮೯-೯೦ರ ಸಾಲಿಗೆ ಈ ಯೋಜನೆಗೆ ರೂ. ೧೦,೦೦ ಲಕ್ಷಗಳನ್ನು ನಿಗದಿಪಡಿಸಲಾಗಿದೆ.